**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ1832/2023</u>**

**<u>ಪಿರ್ಯಾದಿ:</u>** ರಾಜ್ಯದ ಪರವಾಗಿ ಅಜ್ಜಂಪುರ ಪೊಲೀಸರು

**- ವಿರುದ್ಧ -**

**<u>ಆರೋಪಿ/ತರು:</u>**

1. ಶ್ರೀಮತಿ ರುದ್ರಮ್ಮ ಕೋಂ ಸಿ.ಎನ್.ಚನ್ನಬಸಪ್ಪ, ಸುಮಾರು 38 ವರ್ಷ,
2. ಶ್ರೀ ಮಾರುತಿ ಬಿನ್ ಸಿ.ಎನ್.ಚನ್ನಬಸಪ್ಪ, ಸುಮಾರು 21 ವರ್ಷ,
3. ಶ್ರೀ ಸಿ.ಎನ್.ಚನ್ನಬಸಪ್ಪ ಬಿನ್ ನಾಗರಾಜಪ್ಪ, ಸುಮಾರು 47 ವರ್ಷ,

ಎಲ್ಲರ ವಾಸಃ ಚಿಕ್ಕಾನವಂಗಲ ಗ್ರಾಮ, ಶಿವನಿ ಹೋಬಳಿ, ಅಜ್ಜಂಪುರ ತಾಲ್ಲೂಕು.

****

**<u>-ಃ ದೋಷಾರೋಪಣೆ ಃ-</u>**

ಶ್ರೀ ಶಿವಕುಮಾರ್.ಆರ್., ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿತರಾದ ನಿಮ್ಮಗಳ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 08.12.2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ, ಜಲಧೀಹಳ್ಳಿ ಗ್ರಾಮದ ಸರ್ವೇ ನಂಬರ್ 72 ರಲ್ಲಿನ ಅಡಿಕೆ ತೋಟದಲ್ಲಿ ಚಾಸಾ-1 ಶ್ರೀಮತಿ ಚಂದ್ರಮ್ಮ ಮತ್ತು ಚಾಸಾ-2 ಶ್ರೀ ಕಲ್ಲೇಶಪ್ಪ ರವರು ಅನುಭೋಗದಲ್ಲಿರುವ ಸರ್ವೇ ನಂಬರ್ 72 ರಲ್ಲಿನ ಅಡಿಕೆ ತೋಟದಲ್ಲಿ ನೀರು ಬಿಡುತ್ತಾ ಅಡಿಕೆ ಗಿಡಗಳಿಗೆ ಸುಣ್ಣವನ್ನು ಹೊಡೆಯುತ್ತಿರುವಾಗ ಆರೋಪಿಗಳಾದ ನೀವು ಆಸ್ತಿಯ ಹಂಚಿಕೆಯ ವಿಚಾರದಲ್ಲಿ ಹಳೆಯ ದ್ವೇಷವನ್ನು

ಇಟ್ಟುಕೊಂಡು 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ತೋಟದ ತಂತಿ ಬೇಲಿಯನ್ನು ದಾಟಿ ತೋಟಕ್ಕೆ ಬಂದು ಕೆಲಸ ಮಾಡುತ್ತಿದ್ದ ಚಾಸಾ-1 ಮತ್ತು 2 ರವರನ್ನು ಅಡ್ಡಗಟ್ಟಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಸೂಳೆಮುಂಡೆ, ಬೋಳಿಮುಂಡೆ, ಹಾದರಗಿತ್ತಿ ಈ ತೋಟಕ್ಕೆ ಕಾಲಿಡಬೇಡ ಎಂದರು ಏಕೆ ಬಂದಿದ್ದೀಯಾ ಎಷ್ಟು ಸಲ ಹೇಳುವುದು ಎಂದು ಅವಾಚ್ಯವಾಗಿ ಬೈದಿದ್ದಲ್ಲದೆ, ಜಗಳವನ್ನು ಬಿಡಿಸಲು ಬಂದ ಚಾಸಾ-2 ರವರಿಗೆ 2 ನೇ ಆರೋಪಿಯಾದ ನೀವು ಬೋಳಿಮಗನೇ, ಸೂಳೆಮಗನೇ ಎಂದು ಬೈದಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು, 1 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-1 ರವರ ಹೊಟ್ಟೆಯ ಭಾಗಕ್ಕೆ ಹೊಡೆದು ತಲೆ ಕೂದಲಿಗೆ ಕೈಹಾಕಿ ಎಳೆದು ಕೆಳಕ್ಕೆ ಕೆಡವಿದ್ದಲ್ಲದೆ, ಜಗಳವನ್ನು ಬಿಡಿಸಲು ಬಂದ ಚಾಸಾ-2 ರವರಿಗೆ 3 ನೇ ಆರೋಪಿಯಾದ ನೀವು ಕೈಯಿಂದ ಚಾಸಾ-2 ರವರ ಕಪಾಳಕ್ಕೆ ಹೊಡೆದು ಕೆಳಗೆ ಬಿಳಿಸಿ ಕಾಲಿನಿಂದ ತುಳಿದು ಮೈಕೈಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು, 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆದಕಾರಣ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಸಮಾನ ಉದ್ದೇಶದಿಂದ ಮುಂದುವರಿದು, 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ತಮ್ಮ ತಂಟೆಗೆ ಬಂದರೆ ನಿಮ್ಮ ಗುಡಿಸಲಿಗೆ ಬೆಂಕಿಯಾಕಿ ಜೀವಂತವಾಗಿ ಸುಟ್ಟು ಬಿಡುತ್ತೇನೆಂದು ಕೊಲೆ ಬೆದರಿಕೆ ಹಾಕಿದ್ದಲ್ಲದೆ, 2 ನೇ ಆರೋಪಿಯಾದ ನೀವು ಚಾಸಾ-2 ರವರಿಗೆ ನಿಮ್ಮ ಕಿರಿಯ ಮಗ ಈ ತೋಟದ ವಿಚಾರದಲ್ಲಿ ನಮ್ಮ ಸಹವಾಸಕ್ಕೆ ಬಂದರೆ ಅವರ ಪ್ರಾಣ ತೆಗೆಯುತ್ತೇವೆಂದು ಕೊಲೆ ಬೆದರಿಕೆ ಹಾಕಿದ್ದಲ್ಲದೆ, 3 ನೇ ಆರೋಪಿಯಾದ ನೀವು ಚಾಸಾ-2 ರವರಿಗೆ ಈ ತೋಟದ ತಂಟೆಗೆ ಬಂದರೆ ನಿಮ್ಮನ್ನು ಮಚ್ಚಿನಿಂದ ಹೊಡೆದು ಪ್ರಾಣ ತೆಗೆದು ಇಲ್ಲಿಯೇ ಸಮಾಧಿ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 15.05.2024 ಸಹಿ/-

(ಶಿವಕುಮಾರ್.ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆಚ್ಚುವರಿ ಪ್ರ.ದ.ನ್ಯಾದಂ.,ತರೀಕೆರೆ.